ನಾನು ಅರಿತುಕೊಳ್ಳುತ್ತಾ ಬಂದೆ. ಹೀಗಾಗಿ ನಾನು ಲೇಖಕಿಯಾಗುವ ಬಯಕೆ ಸಾಯುತ್ತಿತ್ತು. ನಿಜ ಹೇಳಬೇಕೆಂದರೆ, ನಿಮ್ಮ ಇಂಥ ಜೀವನದಿಂದ ನಮಗಷ್ಟೇ ಅಲ್ಲ, ನಿಮಗೂ ಸಹ ಅದೆಷ್ಟು ನಿರಾಸೆಯಾಗುತ್ತಿದೆ ಎಂಬುದನ್ನು ಸಹ ನಾನು ತಿಳಿದಿದ್ದೇನೆ. ಅಪ್ಪಾ, ಇದು ನಿಜ ತಾನೇ?'

ಆಗ ಅವನು ಮನಸ್ಸಿನಲ್ಲಿಯೇ ಯೋಚಿಸಿದ, ಹೌದು, ನಿಜವಾಗಿ ನಾನು ನನ್ನ ಬಗ್ಗೆಯೇ ಅದೆಷ್ಟು ನಿರಾಸೆ ತಾಳಿದ್ದೇನೆ. ಒಬ್ಬ ಲೇಖಕ ಎಷ್ಟು ತುಚ್ಛನಾಗುತ್ತಾನೆ ಎಂಬುದನ್ನು ಇಂದು ನನ್ನ ಮಗಳೂ ಸಹ ನನ್ನನ್ನು ನೋಡಿ ತಿಳಿದುಕೊಂಡಿದ್ದಾಳೆ. ಒಂದು ವೇಳೆ ನಾನು ನನ್ನ ಕಿಶೋರಾವಸ್ಥೆಯಲ್ಲಿ ಇಂಥ ಜ್ಞಾನವನ್ನು ಪಡೆದಿದ್ದರೆ, ಬಹುಶಃ ನಾನೂ ಸಹ ಈ ಸಮಾಜದಲ್ಲಿ ಹೀಗೆ ನಿರಾಶೆ ಹೊಂದಿದ ವ್ಯಕ್ತಿಯಾಗುತ್ತಿರಲಿಲ್ಲ. ಏನು ಮಾಡಲಿ! ಅಭಾವ ಮತ್ತು ಕಷ್ಟಗಳ ಹೊಡೆತಗಳನ್ನು ಸಹಿಸಿಕೊಳ್ಳುತ್ತಾ ಬಂದ ಕುಟುಂಬದಲ್ಲಿ ಜನಿಸಿದೆ; ಪ್ರತಿಯೊಬ್ಬ ಪ್ರಾಮಾಣಿಕ ಕವಿ, ಲೇಖಕ ಅಥವಾ ಸಾಹಿತಿಯ ಮಾನಸಿಕ ಸ್ಥಿತಿ ಗತಿಗಳೂ ಸಹ ಈ ಸಮಾಜದಲ್ಲಿ ಈ ಅಭಾವಗಳು ಮತ್ತು ಕಷ್ಟಗಳ ಪ್ರಹಾರ ಗಳಿಂದ ನಿರ್ಮಾಣಗೊಳ್ಳುತ್ತವೆ. ಆ ಪ್ರಹಾರಗಳನ್ನು ಅನುಭವಿಸುತ್ತಾ, ಪ್ರತಿಯೊಬ್ಬ ಸಾಹಿತಿ ಸದಾ ಕಾಲ ತನ್ನ ಏಕಾಂತವಾಸದಲ್ಲಿ ಅನಾಥನಂತೆ ರೋದಿಸುತ್ತಾನೆ. ಕಾಲ ಮತ್ತು ವಯಸ್ಸಿನ ಸ್ಫೂರ್ತಿಯಲ್ಲಿ ಇಂಥ ಜನ ತಲೆಯೆತ್ತಿ ಅಲ್ಲಿಇಲ್ಲಿ ಹೆಸರು ಗಳಿಸಿದರೂ ನಂತರದಲ್ಲಿ ಅವರು ಮನೆ ಮತ್ತು ಸಮಾಜದ ಅವಹೇಳನ, ತಿರಸ್ಕಾರ ಮತ್ತು ಪಕ್ಷಪಾತದ ವ್ಯವಹಾರದಿಂದಾಗಿ, ಒಂದು ದಿನ ನೊಂದು ಇಹಲೋಕವನ್ನು ತ್ಯಜಿಸುತ್ತಾರೆ.

ಅವನು ಮತ್ತೊಮ್ಮೆ ತನ್ನ ಮಗಳು ಹೇಳಿದ ಮಾತುಗಳನ್ನು ಕೇಳುವ ಇಚ್ಛೆಯನ್ನು ತೋರಿಸಲು ಪ್ರಯತ್ನಿಸುತ್ತಾ ಹೇಳಿದ, 'ಇವತ್ತು ನೀನೇಕೆ ನನಗೆ ಇಂಥ ಪ್ರಶ್ನೆಗಳನ್ನು ಕೇಳುತ್ತಿದ್ದೀಯ? ನಾನು ನಿರಾಸೆಗೊಂಡಿದ್ದೇನೆ ಎಂದು ನೀನು ಹೇಗೆ ಹೇಳುತ್ತೀಯ?'

ಅವನ ಮಾತು ಕೇಳಿ ಮಗಳು ಮುಗುಳ್ನಗುತ್ತಾ ಹೇಳಿದಳು, 'ಯಾಕೆಂದರೆ ನಾನು ಯಾವ ಕಥೆಗೆ ಬಹುಮಾನವನ್ನು ಪಡೆದೆನೋ ಆ ಕಥೆಯನ್ನು ನಾನು ನಿಮ್ಮ ಫೈಲ್‌ನಿಂದ ತೆಗೆದುಕೊಂಡಿದ್ದೆ; ನೀವು ಬರೆದ ವಿಷಯಗಳು ಮತ್ತು ನನ್ನ ವಿಚಾರಗಳನ್ನು ಬೆರೆಸಿ ಕಥೆಯನ್ನು ಬರೆದಿದ್ದೆ. ಹೀಗೆ ನಾನು ಆ ಕಥೆಯಿಂದಾಗಿ, ನೀವೂ ಸಹ ನಿಮ್ಮ ಜೀವನದ ರೀತಿಯಿಂದ ನಿರಾಶರಾಗಿದ್ದೀರಿ, ನಿಮ್ಮದೇ ಆದ ಗೀಳಿನಲ್ಲಿ ಸಾಗುತ್ತಾ ನೀವು ನಿಮ್ಮ ಕುಟುಂಬದವರ ಅಸಡ್ಡೆಗೆ ಒಳಗೊಳಗೇ ಪರಿತಪಿಸುತ್ತಿದ್ದಿರಿ ಎಂಬುದನ್ನು ಅರಿತೆ. ನಿಮ್ಮ ಈ ಪಶ್ಚಾತ್ತಾಪದಿಂದ ಸಿಗುವುದಾದರೂ ಏನು? ಇಂಥ ವ್ಯರ್ಥ ಜೀವನವನ್ನು ತ್ಯಜಿಸಿ, ಇಲ್ಲಿಂದ ನೀವೇಕೆ ಹೊರ ಬರಲು ಸಾಧ್ಯವಿಲ್ಲ?'

ಎಂಥ ಕಠಿಣ ಪ್ರಶ್ನೆ! ಈಗ ಅವನು ತನ್ನ ಮಗಳಿಗೆ ಏನೆಂದು ಉತ್ತರಿಸುವುದು? ಉತ್ತರಿಸಲು ಏನೂ ಹೊಳೆಯದಿದ್ದಾಗ ಅವನು ಒಂದೇ ಸಮನೆ ತನ್ನ ಮಗಳನ್ನೇ ನೋಡಿದ. ಲೇಖಕನಾಗುವ ಬದ್ಧತೆ ಹೇಗಿರುವುದು ಎಂಬುದನ್ನು ತಿಳಿಯಪಡಿಸಲು ಅವನ ಬಳಿ ಯಾವುದೇ ಶಬ್ದಗಳಿರಲಿಲ್ಲ. ತನ್ನ ಸೋಲನ್ನು ಒಪ್ಪಿಕೊಳ್ಳದೆ ಬೇರೆ ಮಾರ್ಗವಿರಲಿಲ್ಲ; ಅವನು ದೀರ್ಘವಾಗಿ ಉಸಿರೆಳೆದು ಕೊಳ್ಳುತ್ತಾ ದುಃಖದಿಂದ ಹೇಳಿದ, 'ಏನು ಮಾಡಲಿ ಮಗಳೇ! ನನಗೇ ತಿಳಿಯದಂತೆ ನಾನಿಂಥ ಡ್ರಗ್‌ಅಡಿಕ್ಟ್ ಗೆ ಬಲಿಯಾಗಿದ್ದೇನೆ. ಈಗ ಇದರಿಂದ ಹೊರಬರುವ ಶಕ್ತಿ ಮತ್ತು ಮಾರ್ಗ ನನ್ನ ಬಳಿ ಇಲ್ಲ. ಇನ್ನು ಹೇಗೋ ದಿನಗಳು ಕಳೆಯುತ್ತವೆ; ನಾನು ತಾಳಮೇಳವಿಲ್ಲದ ಅಪಸ್ವರದ ವ್ಯಕ್ತಿಯಾಗುತ್ತಾ ಹೋಗುವುದು ನನ್ನ ಬದ್ಧತೆಯಾಗಿದೆ...'

ಅವನು ತನ್ನ ದೋಷವನ್ನು ಒಪ್ಪಿಕೊಂಡ ನಂತರ ಅದೇ ಧ್ವನಿಯಲ್ಲಿ ಹೇಳಿದ, 'ಆದರೆ ನಾನು ನಿನಗೊಂದು ವಿಷಯ ಕೇಳಲು ಬಯಸುತ್ತೇನೆ. ಲೇಖಕರು ಹೀಗೆ ತುಚ್ಛ ವ್ಯಕ್ತಿಗಳಾಗಿರುತ್ತಾರೆ ಎಂಬುದು ನಿನಗೆ ತಿಳಿದಿದೆ; ಆದರೂ ನೀನೇಕೆ ನನ್ನಂತೆ ಲೇಖಕನ ಹಿಂದೆ ಬಿದ್ದು ಬಹುಮಾನ ಪಡೆಯುವ ಆಸೆಯನ್ನು ಆಯ್ದುಕೊಂಡೆ?'

'ಇಲ್ಲ ಅಪ್ಪಾ, ನೀವು ನನ್ನನ್ನು ತಪ್ಪಾಗಿ ತಿಳಿಯುತ್ತಿದ್ದೀರಿ. ನಾನು ಬರವಣಿಗೆಯಲ್ಲಿ ತೊಡಗಿಸಿಕೊಂಡಿಲ್ಲ. ಜೀವನದಲ್ಲಿ ನಾನು ಸದಾ ಮುಂದೆ ನೋಡುವುದನ್ನೇ ಅಭ್ಯಾಸ ಮಾಡಿಕೊಳ್ಳಲು ಬಯಸುತ್ತೇನೆ. ಇದಕ್ಕಾಗಿಯೇ ನಾನು, ಪ್ರತಿಯೊಂದನ್ನು ಹಿಂದುಮುಂದು ಯೋಚಿಸಿ ವಿಶ್ಲೇಷಣೆ ಮಾಡುವ ನಿಮ್ಮಂಥ ವ್ಯಕ್ತಿಯಾಗಲು ನಾನು ಬಯಸುವುದಿಲ್ಲ. ಇನ್ನೊಬ್ಬರಿಂದಲೂ ಹೀಗೆ ಯಾವುದೇ ವಿಷಯದಲ್ಲಿ ಹಿಂದು ಮುಂದು ವಿಶ್ಲೇಷಣೆ ಮಾಡಿಸುವಂಥ ವ್ಯಕ್ತಿ



ನನಗೆ ಸರಿ ಕಾಣವುದಿಲ್ಲ. ಮನುಷ್ಯ ಯಾವುದನ್ನಾದರೂ ಸದಾ ಪೂರ್ಣವಾಗಿ ಒಪ್ಪಿ ನಡೆಯಬೇಕು, ಇದು ನನ್ನ ಅಭಿಪ್ರಾಯ. ಯಾವುದೇ ವಿಚಾರದಲ್ಲಿ ತಪ್ಪು ಹೊರಿಸಬಾರದು. ಮನುಷ್ಯ ಸದಾ ಸೌಂದರ್ಯದ ಹಿಂದೆ ಹೋಗುತ್ತಾನೆ ಎಂಬುದು ನಿಮಗೆ ತಿಳಿದಿದೆ. ಆದರೆ ಸೌಂದರ್ಯ ಒಂದು ವಸ್ತುವಿನ ಹೊರ ಆವರಣದ ಹೆಸರಾಗಿದೆ. ಪುರುಷನ ಸೌಂದರ್ಯ ಅವನ ಪೂರ್ಣತ್ವದಲ್ಲಿದೆ ಅವನ ಸೌಂದರ್ಯವನ್ನು ವಿಶ್ಲೇಷಣೆ ಮಾಡಲು ದಳಗಳನ್ನು ಕಿತ್ತುಕಿತ್ತು ನೋಡಿದರೆ ಅವನ ಸೌಂದರ್ಯ ನಷ್ಟವಾಗುತ್ತದೆ; ಆಗ ಸೌಂದರ್ಯ ಎಲ್ಲೂ ಕಾಣ ಬರುವುದಿಲ್ಲ.'

ಮಗಳು ಒಂದು ಕ್ಷಣ ತಡೆದು ಮತ್ತೆ ಹೇಳಿದಳು, 'ಅಪ್ಪಾ, ನಾನು ನಿಮಗೆ ಇನ್ನೊಂದು ವಿಷಯವನ್ನು ಹೇಳಲು ಬಯಸುತ್ತೇನೆ, ಆದರೆ ಅದನ್ನು ಕೇಳಿ ನೀವು ಸಿಟ್ಟಾಗುವುದಿಲ್ಲ ತಾನೇ?' ಈಗ ಅವನ ಬಳಿ ಬೇರೆ ಮಾರ್ಗವಿರಲಿಲ್ಲ. ಹೀಗಾಗಿ ಹೇಳಿದ, 'ಹೇಳು, ಇವತ್ತು ನೀನು ಏನೇ ಹೇಳಿದರೂ ನಾನು ಸಿಟ್ಟಾಗುವುದಿಲ್ಲ ಅಥವಾ ನನಗೆ ದುಃಖವಾಗುವುದಿಲ್ಲ.'

'ಅಪ್ಪಾ, ನಿಜ ಹೇಳಬೇಕೆಂದರೆ ಇಂದಿನ ಕಾಲದಲ್ಲಿ ನಿಮ್ಮಂತೆ ಪ್ರಾಮಾಣಿಕ ವ್ಯಕ್ತಿಯಾಗಿ ಬದುಕುವ ಇಚ್ಛೆ ನನಗಿಲ್ಲ. ಸಮಯ ಮತ್ತು ಅವಕಾಶದ ಲಾಭ ಪಡೆಯುವ ವ್ಯಕ್ತಿ ಸಮಯಕ್ಕನುಗುಣವಾಗಿ ಯುಕ್ತಿಗಳನ್ನು ಮಾಡಿ ಅದರಿಂದ ಲಾಭ ಪಡೆಯಬೇಕು. ಅಂದು ನಾನು, ನಾನೊಬ್ಬ ಮಹಾನ್ ಲೇಖಕಿ ಎಂಬುದನ್ನು ಸಾಬೀತುಪಡಿಸಲು ಅಲ್ಲ, ಪ್ರತಿಯಾಗಿ ಜೀವನದ ಪ್ರತಿಯೊಂದು ಸ್ಪರ್ಧೆಯಲ್ಲೂ, ಹೇಗಾದರೂ ಮಾಡಿ ಇನ್ನೊಬ್ಬರನ್ನು ಹಿಂದಿಕ್ಕಿ ನಾನು ಮುಂದುವರೆಯಬೇಕು ಎಂಬ ಉದ್ದೇಶದಿಂದಲೇ ನಾನು ಕಥೆಯನ್ನು ಕದ್ದಿದ್ದೆ...ಅಪ್ಪಾ, ಒಂದು ಕ್ಷಣ ತಾಳಿ, ನಾನೀಗಲೇ ಬರುತ್ತೇನೆ' ಎನ್ನುತ್ತಾ ಮಗಳು ಇನ್ನೊಂದು ಕೋಣೆಗೆ ಹೋದಳು.

ಕೆಲವೇ ಕ್ಷಣಗಳಲ್ಲಿ ಮಗಳು ತನ್ನ ಕೈಯಲ್ಲಿ ಒಂದು ಪಾಲಿಥಿನ್ ಬ್ಯಾಗ್ ಹಿಡಿದು ಬಂದು, ಅದನ್ನು ತನ್ನ ಹಿಂದಕ್ಕೆ ಹಿಡಿದು ವ್ಯಂಗ್ಯದಿಂದ, ಮುಗುಳ್ನಗುತ್ತಾ ಹೇಳಿದಳು, 'ನಿಮ್ಮ ಬರವಣಿಗೆಯಿಂದ ಕಿಂಚಿತ್ತೂ ಲಾಭವಿಲ್ಲವೆಂದು ಅಮ್ಮ ಹೇಳುತ್ತಾಳೆ, ಅಲ್ಲವೇ ಅಪ್ಪಾ? ಅದಕ್ಕೇ, ನಿಮ್ಮ ಬರವಣಿಗೆಯಿಂದ ನಮಗೂ ಸ್ವಲ್ಪ ಲಾಭವಾಗಲಿ ಎಂದು ಯೋಚಿಸಿ ನಾನು ಹೀಗೆ ಮಾಡಿದೆ.....ಈಗ ಮಗಳು ಆ ಬ್ಯಾಗಿನಿಂದ ಒಂದು ಹೊಸ ಸೀರೆಯನ್ನು ಹೊರತೆಗೆದು ತಂದೆಯ ಕೈಯಲ್ಲಿಡುತ್ತಾ ಹೇಳಿದಳು, ಅಮ್ಮಂಗೆ ಇಂಥ ಸಿಲ್ಕಿನ ಸೀರೆ ಉಡುವ ಆಸೆ ತುಂಬಾ ದಿನಗಳಿಂದ ಇತ್ತು. ಆದರೆ ಆ ಅದೃಷ್ಟ ಅವಳಿಗೆಲ್ಲಿತ್ತು? ಒಂದೇ ರೀತಿಯ ಅಗ್ಗದ ಸಿಂಥೆಟಿಕ್ ಸೀರೆ ಉಟ್ಟು ಸಿಲ್ಕ್ ಸೀರೆ ಉಡುವ ಆಸೆಯನ್ನು ಹೊಡೆದೋಡಿಸಬೇಕೆ?...ಇದನ್ನೇ ಯೋಚಿಸಿ ನಾನು ಆ ಬಹುಮಾನದ ಹಣದಿಂದ ಅಮ್ಮನಿಗಾಗಿ ಈ ಸಿಲ್ಕ್ ಸೀರೆಯನ್ನು ತಂದು ಕೊಟ್ಟಿದ್ದೇನೆ. ಆ ಬಹುಮಾನದ ಹಣದಿಂದ ತಂದಿರುವ ಈ ಸೀರೆಯನ್ನು ನೀವು ಅಮ್ಮನ ಹುಟ್ಟುಹಬ್ಬದಂದು ಕೊಟ್ಟರೆ ಖಂಡಿತ ಅಮ್ಮಂಗೆ ಖುಷಿಯಾಗು ವುದೆಂದು ನನಗೆ ಅನ್ನಿಸುತ್ತಿದೆ. ನಿಮ್ಮ ಬರವಣಿಗೆಯಿಂದ ಕಡೇ ಪಕ್ಷ ಈ ಲಾಭವಾದರೂ ಆಗಲಿ ಎಂದು ಯೋಚಿಸಿ ಹೀಗೆ ಮಾಡಿದೆ. ಇದಕ್ಕೆ ನೀವು ರೇಗಬಾರದು.'

ಮಗಳ ಈ ಮಾತುಗಳನ್ನು ಕೇಳಿ ಅವನಿಗೆ ಅತೀವ ದುಃಖವಾಯಿತು. ತಾನು ಲೇಖಕನಾಗುವ ಅಂತಿಮ ಇಚ್ಛೆಯಿಂದಾಗಿ ಈ ಸ್ಥಿತಿ ಬಂದಿದೆ ಎಂದು ಅವನಿಗೆ ಅನ್ನಿಸಿತು. ಅವನಿಗೆ ತನ್ನೊಳಗೆ ದುಃಖದ ಅನುಭವ ಕಾಡಿತು. ಆ ದುಃಖದ ಭರದಲ್ಲಿ ಅವನು ಯೋಚಿಸಿದ, ಮಗಳು ಮಾಡಿದ್ದು ಸರಿಯೇ ಆಗಿದೆ. ಆದರೆ ಮಗಳು ಹೀಗೆ ಪಡೆದ ಪ್ರೈಸ್ ಮನಿಯ ಕಥೆಯನ್ನು ಈಗ ನಾನೇನು ಮಾಡಬೇಕು?